ದಿನಾಂಕ 20.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ- 2 ಮತ್ತು 8 ನೇ ಎದುರುದಾರರ ಪರವಾಗಿ ಶ್ರೀ. ಎಸ್ ಪಿ ಪಿ ವಕೀಲರಿಂದ ಶ್ರೀ. ಎಸ್ ಎಸ್ ಪಿ ರವರ ಪರವಾಗಿ-

16. ನನ್ನ ಮತ್ತು ನನ್ನ ಸಹೋದರರ ಮಧ್ಯೆ 1966 ರಲ್ಲಿಯೇ ವಿಭಾಗ ಆಗಿದೆ ಎಂದರೆ ಸರಿ. ಆ ವಿಭಾಗದ ಆಧಾರದ ಮೇರೆಗೆ ನಾವುಗಳು ಆಸ್ತಿಗಳ ಖಾತೆ ಬದಲಾವಣೆಯನ್ನು ಮಾಡಿಸಿಕೊಂಡಿದ್ದೆವು ಮತ್ತು ನಮ್ಮ ನಮ್ಮ ಆಸ್ತಿಗಳಲ್ಲಿ ಸ್ವಾಧೀನದಲ್ಲಿ ಇದ್ದೆವು. ಆ ವಿಭಾಗದಲ್ಲಿ ನನ್ನ ಅಣ್ಣನಾದ ಸೋಮಶೇಖರ ರವರ ಭಾಗಾಂಶಕ್ಕೆ ಯಾವ ಆಸ್ತಿಗಳನ್ನು ಕೊಡಲಾಗಿದೆಯೋ ಆ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಸಂಬಂಧ ಇಲ್ಲ ಎಂದರೆ ಸಂಬಂಧ ಇದೆ.

17. ಸಾಧ್ಯವಾದರೆ ಅಕ್ರಮ ಲಾಭ ಹೊಂದಬೇಕು ಎಂಬ ದುರುದ್ದೇಶದಿಂದ ನಾನು 4 ನೇ ಎದುರುದಾರರ ಅಂದರೆ ಸೋಮಶೇಖರ ರವರ ಭಾಗಾಂಶಕ್ಕೆ ಹೋಗಿರುವ ಆಸ್ತಿಗಳ ಮೇಲೆ ನನಗೆ ಸಂಬಂಧ ಇದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

18. 4 ನೇ ಎದುರುದಾರರಾದ ಸೋಮಶೇಖರ ಮತ್ತು ಅವರ ಮಕ್ಕಳ ನಡುವೆ ಆಗಿರುವ ವಿಭಾಗ ಪತ್ರದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ನನಗೆ ಬರುತ್ತದೆ. 4 ನೇ ಎದುರುದಾರರಾದ ಸೋಮಶೇಖರ ಮತ್ತು ಅವರ ಮಕ್ಕಳ ನಡುವೆ ಆಗಿರುವ ವಿಭಾಗ ಪತ್ರವನ್ನು ನಾನೇ ಹಾಜರು ಪಡಿಸಿದ್ದೇನೆ ಮತ್ತು ಅದು ನಿಆರ್-41 ಆಗಿದೆ ಎಂದರೆ ಸರಿ.

19. ನಿಆರ್-41 ದಾಖಲೆಯಲ್ಲಿ ಬರೆದಿರುವ ಸಂಗತಿಗಳ ಪ್ರಕಾರ ಸ.ನಂ.140/2-ಪಿ2 ನಲ್ಲಿ 3 ಗುಂಟೆ ಆಸ್ತಿಯು ಲಿಂಗಪ್ಪ ರವರ ಭಾಗಾಂಶಕ್ಕೆ ಹೋಗಿದೆ ಎಂದರೆ ಸುಳ್ಳು.

20. ಈಗ ಸಾಕ್ಷಿಗೆ ನಿಆರ್-41 ದಾಖಲೆಯಲ್ಲಿ **ಡಿ** ಹಿಸ್ಸೆಯಲ್ಲಿ ಇರುವಂತಹ 3 ನೇ ಆಸ್ತಿಯ ಎಲ್ಲಾ ವಿವರಗಳನ್ನು ಈ ಸಾಕ್ಷಿಗೆ ಓದಿ ಹೇಳಿ ನಂತರ ವಕೀಲರು " ಈ ಆಸ್ತಿಯು ಲಿಂಗಪ್ಪ ರವರಿಗೆ ಸೇರಿದೆ " ಎಂದು ಸೂಚಿಸಿದ್ದಾರೆ ಅದಕ್ಕೆ ಸಾಕ್ಷಿಯು "ಸುಳ್ಳು" ಎಂದು ನುಡಿದಿದ್ದಾರೆ.

21. ನಿಆರ್-41 ದಾಖಲೆಯಲ್ಲಿ **ಡಿ** ಹಿಸ್ಸೆಯಲ್ಲಿರುವಂತಹ 3 ನೇ ಆಸ್ತಿಯ ಪೈಕಿ ಪೂರ್ವ ಪಶ್ಚಿಮ ಐವತ್ತೊಂದುವರೆ ಅಡಿ ಮತ್ತು ಉತ್ತರ ದಕ್ಷಿಣ ನೂರಇಪ್ಪತ್ತೆಂಟು ಅಡಿ

ವಿಸ್ತೀರ್ಣದ ಖಾಲಿ ನಿವೇಶನವನ್ನು ಸದರಿ ಲಿಂಗಪ್ಪ ರವರು ಈ ಪ್ರಕರಣದ 2 ನೇ ಎದುರುದಾರರಾದ ಲೋಕೇಶ ರವರಿಗೆ ಮಾರಾಟ ಮಾಡಿದ್ದಾರೆ ಮತ್ತು ಅದೇ ರೀತಿ ಆ **ಡಿ** ಹಿಸ್ಸೆಯ 2 ನೇ item ಆಸ್ತಿಯನ್ನು ಸಹಾ ಸದರಿ ಲೋಕೇಶ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

22. ನಿಆರ್–41 ದಾಖಲೆಯಲ್ಲಿ **ಡಿ** ಹಿಸ್ಸೆಯಲ್ಲಿರುವಂತಹ 3 ನೇ ಆಸ್ತಿಯ ಪೈಕಿ 2 ನೇ ಎದುರುದಾರರಾದ ಲೋಕೇಶ ರವರಿಗೆ ಮಾರಾಟ ಮಾಡಿದ ನಂತರ ಆ ಆಸ್ತಿಯ ಪೈಕಿ **ಉಳಿದಂತಹ ವಿಸ್ತೀರ್ಣವನ್ನು** ಲಿಂಗಪ್ಪ ರವರು ಓರ್ವ ಸೈಫುಲ್ಲಾ ಷರೀಫ್ ರವರಿಗೆ ಮಾರಾಟ ಮಾಡಿದ್ದಾರೆ ಮತ್ತು ಸೈಫುಲ್ಲಾ ಷರೀಫ್ ರವರಿಂದ 8 ನೇ ಎದುರುದಾರರಾದ ರಮೇಶ ಕುಮಾರ್ ರವರು ಖರೀದಿ ಮಾಡಿದ್ದಾರೆ ಎಂದರೆ ಸುಳ್ಳು.

23. ನಿಆರ್–41 ದಾಖಲೆಯಲ್ಲಿ **ಡಿ** ಹಿಸ್ಸೆಯಲ್ಲಿರುವಂತಹ 2 ಮತ್ತು 3 ನೇ ಆಸ್ತಿಗೆ ಕ್ರಮವಾಗಿ 2 ಮತ್ತು 8 ನೇ ಎದುರುದಾರರು ಮಾತ್ರ ಹಕ್ಕುದಾರರು ಆಗಿದ್ದಾರೆ ಮತ್ತು ಆ ಸಂಬಂಧವಾಗಿ ಬರುವಂತಹ ಪರಿಹಾರದ ಹಣವು ಅವರಿಬ್ಬರಿಗೆ ಮಾತ್ರ ಸಲ್ಲಬೇಕು ಎಂದರೆ ಸುಳ್ಳು.

24. ನನ್ನ ಮತ್ತು ನನ್ನ ಸಹೋದರರ ಮಧ್ಯೆ 1966 ನೇ ಇಸವಿಯಲ್ಲಿ ಆಗಿರುವಂತಹ ವಿಭಾಗ ಪತ್ರವನ್ನು ನಾನು ಯಾವುದಾದರೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೋ ಹೇಗೆ ಎಂದರೆ AC ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ, ಆದರೆ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ.

25. 2 ಮತ್ತು 8 ನೇ ಎದುರುದಾರರಿಗೆ ಸಂಬಂಧಿಸಿದ ಪರಿಹಾರದ ಹಣದ ಮೇಲೆ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹಾ ದುರ್ಲಾಭ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ – ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.